ಒಎಸ್–260/2002
ಪಿ.ಡಬ್ಲ್ಯೂ -1

ದಿಃ 27-03-2015 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ವಕೀಲ ರವರಿಂದಃ

ನಾನು 1, 2, 4 ಮತ್ತು 5ನೇ ವಾದಿಯರಿಗೆ ಪೋಷಕಳಾಗಿ ಕಾರ್ಯ ನಿರ್ವಹಿಸಲು ಉ ಚಿಟಿಜ ಫಾಅ ಪ್ರಕರಣ ಹಾಕಿ ನ್ಯಾಯಾಲಯದಿಂದ ಆದೇಶ ಪಡೆದಿಲ್ಲ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ಅನುಮತಿ ಪಡೆದಿದ್ದೇನೆಂದು ಹೇಳುತ್ತಾರೆ. 1 ನೇ ಪ್ರತಿವಾದಿ ಕೊಲೆ ಪ್ರಕರಣದಲ್ಲಿ ಆರೋಪಿ ಮತ್ತು ಅವನಿಗೆ ಶಿಕ್ಷೆ ಆಗಿದೆ ಎಂದರೆ ಗೊತ್ತಿಲ್ಲ. ನನ್ನ ಗಂಡನ ಊರು ಮೆಳವಂಕಿ ಸಣ್ಣ ಹಳ್ಳಿ. ಈ ಎಲ್ಲಾ ವಿಷಯಗಳು ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನೇ 1, 2, 4 ಮತ್ತು 5ನೇ ವಾದಿಯರಿಗೆ ಪೋಷಕಳಾಗಿ ಸಂರಕ್ಷಿಸುತ್ತಿದ್ದೇನೆಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಮಾಡಿಲ್ಲ. ರಾಯಪ್ಪ ದಾವಾ ಆಸ್ತಿಯನ್ನು ಖರೀದಿಗೆ ಪಡೆದಿದ್ದಾನೆ ಎಂದರೆ ಸಾಕ್ಷಿಯು ಹೊಲವನ್ನು ಮಾರಿ ಹೊಲವನ್ನು ತೆಗೆದುಕೊಂಡಿದ್ದಾನೆಂದು ಹೇಳುತ್ತಾರೆ ಆ ಹೊಲವನ್ನು ಯಾವಾಗ ಯಾರಿಗೆ ಮಾರಿದ್ದಾನೆಂದರೆ ನನಗೆ ಗೊತ್ತಿಲ್ಲ. ರಾಯಪ್ಪ ಮೊದಲಿನ ಆಸ್ತಿ ಮಾರಿದ 6 ತಿಂಗಳ ನಂತರ ಈ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡನು. 2ನೇ ಪ್ರತಿವಾದಿಗೆ ಆಸ್ತಿಯನ್ನು ಮಾರುವ ಮುನ್ನ ರಾಯಪ್ಪ ನೊಂದಾಯಿತ ಕರಾರು ಪತ್ರವನ್ನು ಬರೆದುಕೊಟ್ಟಿದ್ದನೆಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧ ಪಟ್ಟ ಯಾವುದೇ ಕಾಗದ ಪತ್ರಗಳನ್ನು ನೋಡಿಲ್ಲ.

ನಾನು ವಕೀಲರಿಗೆ ಮಾಹಿತಿ ಕೊಡುವಾಗಲೂ ಕಾಗದ ಪತ್ರಗಳನ್ನು ನೋಡಿಲ್ಲ. ಮೌಖಿಕವಾಗಿಯೇ ಹೇಳಿದ್ದೇನೆ. ರಾಯಪ್ಪ ಮತ್ತು ಮಕ್ಕಳು 2ನೇ ಪ್ರತಿವಾದಿ ವಿರುದ್ಧ ಬೈಲಹೊಂಗಲದಲ್ಲಿ ಕೇಸು ಹಾಕಿದ್ದರೆಂದರೆ ನಿಜ. ಆ ಕೇಸು ರಾಯಪ್ಪನ ಪರ ಆಗಿದೆ. ಆಸ್ತಿಯನ್ನು ಖರೀದಿ ಕೊಡುವ ಕಾಲಕ್ಕೆ ಉತಾರನಲ್ಲಿ ರಾಯಪ್ಪನ ಹೆಸರು ಮಾತ್ರ ಇತ್ತೆಂದರೆ ನಿಜ. ನ್ಯಾಯಾಲಯದಿಂದ ಮನಾಯಿ ಆದೇಶ ತೆಗೆದುಕೊಂಡ ಬಗ್ಗೆ ಉಪ ನೋಂದಣಾಧಿಕಾರಿ ಕಛೇರಿಗೆ ಮಾಹಿತಿ ನೀಡಿಲ್ಲ. ಈ ಪ್ರಕರಣದಲ್ಲಿನ ಆಸ್ತಿ ವಿವಾದದ ಬಗ್ಗೆ ಪೇಪರ್‌ನಲ್ಲಿ ಪ್ರಕಟನೆ ಕೊಟ್ಟಿದ್ದೇವೆಂದರೆ ನನಗೆ ಗೊತ್ತಿಲ್ಲ. ಅದು ರಾಯಪ್ಪ ಮತ್ತು ಅವನ ಹೆಂಡತಿಗೆ ಗೊತ್ತು. ರಾಯಪ್ಪ ಅವನ ಹೆಂಡತಿ ಮತ್ತು ಮಕ್ಕಳು ಒಂದೇ ಮನೆಯಲ್ಲಿ ಇರುತ್ತಿದ್ದರೆಂದರೆ ನಿಜ. ರಾಯಪ್ಪನಿಗೆ ಒಕ್ಕಲುತನ ಬಿಟ್ಟರೆ ಬೇರೆ ಉದ್ಯೋಗ ಇಲ್ಲ. ರಾಯಪ್ಪನ ಕೈಯಲ್ಲಿ ಹಣ ಉಳಿಯುತ್ತಿರಲಿಲ್ಲ ಎಂದರೆ ನಿಜ ಅವನ ಖರ್ಚಿಗೆ ನಾನೇ ಹಣ ಕೊಡುತ್ತಿದ್ದೆ. ರಾಯಪ್ಪನ ಹೆಸರಿನಲ್ಲಿ ಒಟ್ಟು ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೇಲೆ ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನಿಗೆ ಸಂಬಂಧಪಟ್ಟ ಕರ ರಶೀದಿಗಳು ನನ್ನ ಹತ್ತಿರ ಇಲ್ಲ. ದಾವಾ ಆಸ್ತಿಗೆ ಕಿಮ್ಮತ್ತು ಹೆಚ್ಚಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾವು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದೇವೆ ಎಂದು ತೋರಿಸಲು ಯಾವ ದಾಖಲಾತಿಗಳು ಇಲ್ಲ. ಪಿ ಡಬ್ಲ್ಯೂ 3 ನನ್ನ ಮಗ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಭೀಮಪ್ಪ ಪಾಟೀಲ, ಪಶ್ಚಿಮಕ್ಕೆ ವಿರೂಪಾಕ್ಷಿ ಐಗೋಳ, ಉತ್ತರಕ್ಕೆ ಕಸ್ತೂರಿ, ದಕ್ಷಿಣಕ್ಕೆ ಯಲ್ಲಪ್ಪನ ಜಮೀನು ಇದೆ. ಪಿ ಡಬ್ಲ್ಯೂ 2 ನ ಆಸ್ತಿ ದಾವಾದ ಆಸ್ತಿಯ ಆಜುಬಾಜು ಇಲ್ಲ. ದಾವಾದ ಆಸ್ತಿಗೆ ನಾನೇ 30 ವರ್ಷದಿಂದ ಪೈಪ್‌ಲೈನ್ ಹಾಕಿಸಿದ್ದೇನೆ. ರಾಯಪ್ಪ ನನ್ನ ತಮ್ಮ ಎಂದು ನಾನು ಈ ಎಲ್ಲ ಖರ್ಚನ್ನು ಮಾಡಿದ್ದೇನೆ. ರಾಯಪ್ಪ ನನ್ನ ತಮ್ಮ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಯಪ್ಪನಿಗೆ ಇದಲ್ಲದೇ 17 ಗುಂಟೆ ಜಮೀನು ಇದೆ ಎಂದರೆ ಸುಳ್ಳು. ರಾಯಪ್ಪ ಸತ್ತ

ನಂತರ ದಾವಾ ಆಸ್ತಿಗೆ ವಾರ್ಸಾ ಮಾಡಿಸಿಲ್ಲ. ರಾಯಪ್ಪ ದಾವಾ ಆಸ್ತಿಯನ್ನು ಮನೆತನದ ಅಡಚಣೆಗಾಗಿ ಮಾರಿದ್ದಾನೆಂದರೆ ಸುಳ್ಳು. ರಾಯಪ್ಪ ದಾವಾ ಆಸ್ತಿಯ ಮೇಲೆ ಯಾವಾಗಲೂ ಸಾಲವನ್ನು ತೆಗೆದುಕೊಂಡಿಲ್ಲ. ಭೀಮಪ್ಪ, ಬಾಳಪ್ಪ ಕರೇಪ್ಪನವರ ಇವರು ಆಸ್ತಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಮೆಳವಂಕಿಯಲ್ಲಿ ಸೊಸೈಟಿ ಇದೆ. ಆ ಸೊಸೈಟಿಯಲ್ಲಿ ರಾಯಪ್ಪ ಸಾಲ ತೆಗೆದುಕೊಂಡಿದ್ದ ಎಂದರೆ ಸುಳ್ಳು. ರಾಯಪ್ಪ ತಕರಾರು ಹಾಕಿದ ಬಗ್ಗೆ ವಕೀಲರನ್ನು ನೇಮಕ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಸಿದ್ದೇವೆಂದರೆ ನಿಜ. ರಾಯಪ್ಪ ದಾವಾ ಆಸ್ತಿಯನ್ನು ಮನೆತನದ ಅಡಚಣೆಗಾಗಿ ಮಾರಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. 2002 ರಲ್ಲಿ ದಾವಾ ಆಸ್ತಿಯ ಕಿಮ್ಮತ್ತು ನನಗೆ ಗೊತ್ತಿಲ್ಲ. ರಾಯಪ್ಪ ಖರೀದಿಗೆ ಕೊಟ್ಟ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ರಾಯಪ್ಪ ಶೇರೆ ಕುಡಿಯುತ್ತಾನೆ ಎಂದು ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ಇವತ್ತಿಗೂ ದಾವಾ ಆಸ್ತಿ 2ನೇ ಪ್ರತಿವಾದಿಯ ಕಬ್ಜಾದಲ್ಲಿದೆ ಎಂದರೆ ಸುಳ್ಳು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ